**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಚಿಕ್ಕನಾಯಕನಹಳ್ಳಿ**

**ಸಿ.ಸಿ. ನಂ.542/2024.**

**ಸಿ ಡಬ್ಲ್ಯೂಃ 4**

**ಪಿ ಡಬ್ಲ್ಯೂಃ 3**

| | | |
|---|---|---|
| ಹೆಸರು | : | ಯಶೋದಮ್ಮ |
| ತಂದೆಯ ಹೆಸರು | : | ರಂಗನಾಥ್ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಹುಚ್ಚನಹಳ್ಳಿ |

**ದಿನಾಂಕಃ 05.11.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ನಾನು ಆರೋಪಿಯನ್ನು ನೋಡಿರುತ್ತೇನೆ. ಈಗ್ಗೆ ಸುಮಾರು 2 ವರ್ಷದ ಹಿಂದೆ ನಾನು ನಮ್ಮ ಗ್ರಾಮದವರಾದ ಚಾಸಾ-2, 3, 5 ರಿಂದ 7 ರವರು ಟ್ರಾಕ್ಟರ್ ನಲ್ಲಿ ಚೋರಗೊಂಡನಹಳ್ಳಿಯ ಗವಿರಂಗನಾಥಸ್ವಾಮಿ ಬೆಟ್ಟಕ್ಕೆ ಹೋಗಿ ಊರಿಗೆ ಬರುತ್ತಿದ್ದೇವು. ಚೋರಗೊಂಡನಹಳ್ಳಿ ಕೆರೆ ಏರಿಯ ಮೇಲಿನಿಂದ ಟ್ರಾಕ್ಟರ್ ಮುಗಚಿ ಬಿದ್ದಿತ್ತು. ಇದರಿಂದ ನನ್ನ ಎದೆಯ ಮೂಳೆ ಮುರಿದು ಕಿವಿಗೆ ಪೆಟ್ಟಾಗಿ ಪ್ರಜ್ಞೆ ತಪ್ಪಿತ್ತು. ಚಾಸಾ-2 ರವರ ಎರಡು ಕಾಲು ಮೂಳೆ ಮುರಿದಿತ್ತು. ಚಾಸಾ-3 ಮತ್ತು 5 ರವರಿಗೂ ಗಾಯಗಳಾಗಿದ್ದವು. ಸದರಿ ಸ್ಥಳದಿಂದ ನಮ್ಮ ಗ್ರಾಮ ಸುಮಾರು 7 ಕೀ ಮಿ ದೂರ ಆಗುತ್ತದೆ. ಟ್ರಾಕ್ಟರ್ ನಲ್ಲಿದ್ದವರು ಪೋನ್ ಮುಖಾಂತರ ವಿಷಯವನ್ನು ತಿಳಿಸಿದರು. ಅಪಘಾತವು ಸಂಜೆ 7.00 ಗಂಟೆಗೆ ಆಗಿರುತ್ತದೆ. ಆರೋಪಿ ಟ್ರಾಕ್ಟರ್ ನ್ನು ಚಲಾಯಿಸುತ್ತಿದ್ದರು. ಸಾಕ್ಷಿಯು ಟ್ರಾಕ್ಟರ್ ನ ಪೊಟೋವನ್ನು ನೋಡಿ

ಗುರುತಿಸುತ್ತಾರೆ. ಅದನ್ನು ನಿಪಿ-5 ಮತ್ತು 6 ಎಂದು ಗುರುತಿಸಲಾಗಿದೆ. ಗಾಯಗೊಂಡ ನಮ್ಮನ್ನು ಅಂಬುಲೆನ್ಸ್ ನಲ್ಲಿ ಚಿಕ್ಕನಾಯಕನಹಳ್ಳಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ವಸಂತಮ್ಮ ರವರನ್ನು ಹೆಚ್ಚಿನ ಚಿಕಿತ್ಸೆಗೆ ಹಾಸನಕ್ಕೆ ಹೋದರು. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯಕ್ಕೆ ಗೈರು ಹಾಜರಿದ್ದು ಅವರ ಪರಿ ವಕೀಲರು ಆರೋಪಿಯನ್ನು ಗುರುತಿಸಲು ತಕರಾರು ಇಲ್ಲ ಎಂದು ಹೇಳಿರುತ್ತಾರೆ.

**(ಈ ಹಂತದಲ್ಲಿ ಸ.ಸ.ಅ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಅವರಿಗೆ ಪಾಟೀ ಸವಾಲು ಮಾಡಲು ಅನುಮತಿಸಬೇಕೆಂದು ಕೇಳಿಕೊಂಡ ಮೇರೆಗೆ ಅನುಮತಿಸಲಾಗಿದೆ)**

**ಪಾಟೀ ಸವಾಲುಃ ಎ ಪಿ ಪಿ ರವರಿಂದಃ**

ದಿನಾಂಕ 13.03.2024 ರಂದು ನಮ್ಮ ಊರಿನಿಂದ ನಾನು ಚಾಸಾ-2, 3, 5 ರಿಂದ 7 ಟ್ರಾಕ್ಟರ್ ನಲ್ಲಿ ಗವಿರಂಗನಾಥಸ್ವಾಮಿ ದೇವಸ್ಥಾನಕ್ಕೆ ಹೋಗಿದ್ದೇವು ಅಂದರೆ ನಿಜ. ಟ್ರಾಕ್ಟರ್ ನಂಃ ಕೆಎ-44-ಟಿಎ-4471 ಹಾಗೂ ಟ್ರೈಲರ್ ನಂಃ ಕೆಎ-44-ಟಿಎ-4472 ಆಗಿತ್ತು ಅಂದರೆ ನಿಜ. ಆ ದಿನ ಆರೋಪಿ ಟ್ರಾಕ್ಟರ್ ನ್ನು ಜೋರಾಗಿ ಚಲಾಯಿಸಿಕೊಂಡು ಕೆರೆ ಏರಿ ಮೇಲೆ ಪಲ್ಟಿ ಮಾಡಿದರು ಅಂದರೆ ನಿಜ. ಪಾರ್ವತಮ್ಮ ರವರಿಗೆ ಮೂಗಿಗೆ ದವಡೆಗೆ ಪೆಟ್ಟಾಗಿತ್ತು ಅಂದರೆ ನಿಜ. ಚಾಸಾ-2 ರವರಿಗೆ ಎರಡು ಕಾಲುಗಳಿಗೆ, ಕೈಗಳಿಗೆ ಪೆಟ್ಟಾಗಿತ್ತು ಅಂದರೆ ನಿಜ. ಚಂದ್ರಮ್ಮರಿಗೆ ಎಡಗಣ್ಣಿನ ಉಬ್ಬಿನ ಬಳಿ ಮತ್ತು ಬಲಗಾಲಿಗೆ ಪೆಟ್ಟಾಗಿತ್ತು ಅಂದರೆ ನಿಜ. ಉಳಿದವರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದವು ಅಂದರೆ ನಿಜ. ಸ್ಥಳೀಯರು ನಮಗೆ ಅಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಸೇರಿಸಿದರು ಅಂದರೆ ನಿಜ.

ಪಾಟೀಸವಾಲುಃ ಶ್ರೀ ಟಿ ಆರ್ ಕೆ ವಕೀಲರಿಂದಃ

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ಹೇಳಿಕೆಯಲ್ಲಿ ಪೊಲೀಸರು ಏನು ಬರೆದುಕೊಂಡಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ಆರೋಪಿ ನಮ್ಮ ಗ್ರಾಮದವರು

ಅಂದರೆ ನಿಜ. ಅವರನ್ನು ನಾನು ಊರಿನಲ್ಲಿ ನೋಡಿರುತ್ತೇನೆ. ಇಂದು ನಾನು ನ್ಯಾಯಾಲಯಕ್ಕೆ ರಂಗಸ್ವಾಮಿ ರವರ ಹೇಳಿಕೆ ಮೇರೆಗೆ ಬಂದಿರುತ್ತೇನೆ ಅಂದರೆ ಸರಿಯಲ್ಲ. ನಾನು, ಚಾಸಾ-1 ರಿಂದ 3 ವಿಶ್ವಾಸ ಅಂದರೆ ನಿಜ. ಅವರು ನಮಗೆ ಸಂಬಂಧಿಕರಾಗಬೇಕು ಅಂದರೆ ನಿಜ. ಆಸ್ಪತ್ರೆಯಲ್ಲಿ ನನಗೆ ಮೂರು ದಿವಸದ ನಂತರ ಪ್ರಜ್ಞೆ ಬಂದಿರುತ್ತದೆ. ಅಪಘಾತ ಸ್ಥಳದಲ್ಲಿ ಹೆಚ್ಚು ವಾಹನಗಳು ಓಡಾಡುತ್ತವೆ ಅಂದರೆ ನಿಜ. ನಮಗೆ ಅಪಘಾತ ಸ್ಥಳದಿಂದ ಹಂದನಕೆರೆ ಆಸ್ಪತ್ರೆ ಹತ್ತಿರವಾಗುತ್ತದೆ ಅಂದರೆ ನಿಜ. ಅಲ್ಲಿ ಎಲ್ಲಾ ತರಹದ ಚಿಕಿತ್ಸೆ ಇದೆ ಅಂದರೆ ಸರಿಯಲ್ಲ. ಅಪಘಾತ ಹೇಗೆ ಆಯಿತು ಎಂದು ನಾನು ನೋಡಿರುವುದಿಲ್ಲ. ನಾನು ಆ ದಿನ ಟ್ರಾಕ್ಟರ್ ನಲ್ಲಿ ಹೋಗಿರುವುದಿಲ್ಲ, ನನಗೆ ಯಾವುದೇ ಅಪಘಾತ ಆಗಿರುವುದಿಲ್ಲ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ,
ಚಿಕ್ಕನಾಯಕನಹಳ್ಳಿ.